**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿ.ಸಿ. 422/2024**

ಪಿರ್ಯಾದುದಾರರು ಃ ಸರ್ಕಾರದ ಪರವಾಗಿ ತರೀಕೆರೆ ಪೊಲೀಸರಿಂದ

-ವಿರುದ್ದ-

ಆರೋಪಿ/ತರು ಃ ರಮೇಶ್

-ಃದೋಷಾರೋಪಣೆಃ-

ಶ್ರೀ ವೈದ್ಯ ಶ್ರೀಕಾಂತ್, ಬಿ.ಎಸ್ಸಿ., ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ತರೀಕೆರೆ ಆದ ನಾನು ಈ ಕೆಳಗೆ ಕಾಣಿಸಿರುವಃ

ರಮೇಶ್ ಬಿನ್ ಎಸ್ ಆರ್ ಕೃಷ್ಣಯ್ಯ, 65 ವರ್ಷ, ವ್ಯವಸಾಯ, ವಾಸಃಹುರುಳಿಹಳ್ಳಿ ಗ್ರಾಮ, ತರೀಕೆರೆ ತಾಃ

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಎಂದರೆಃ

ತರೀಕೆರೆ ಠಾಣಾ ಸರಹದ್ದಿನಲ್ಲಿ ದಿಃ20.01.2024 ರಂದು ಚಾಸಾ-1 ರವರು ಕೆಎ-17/ಎಫ್-1252 ಕೆ ಎಸ್ ಆರ್ ಟಿ ಸಿ ಬಸ್ ಭದ್ರಾವತಿ ಘಟಕದಲ್ಲಿ ನಿರ್ವಾಹಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿ ದಿವಸ ಮಾರ್ಗಸಂಖ್ಯೆ 2829 ಭದ್ರಾವತಿ ಯಿಂದ ತರೀಕೆರೆ ಮಾರ್ಗಕ್ಕೆ ಕೆಎ-17/ಎಫ್-1252 ಕೆ ಎಸ್ ಆರ್ ಟಿ ಸಿ ಬಸ್ ಚಾಲಕರಾಗಿ ಸುರೇಶ್ ಕುಮಾರ್ ಬಿಲ್ಲೆ ಸಂಖ್ಯೆ 1991 ರವರನ್ನು ಹಾಗೂ ಇದೇ ಬಸ್ ನಿರ್ವಾಹಕರಾಗಿ ದುರ್ಗಪ್ಪ ರವರನ್ನು ಚಾಸಾ-8 ರವರು ನೇಮಕ ಮಾಡಿದ್ದು, ಅದರಂತೆ ಬೆಳಿಗ್ಗೆ 10-10 ಗಂಟೆಗೆ ಭದ್ರಾವತಿ ಘಟಕದಿಂದ ಹೊರಟು ಭದ್ರಾವತಿ ಬಸ್ ನಿಲ್ದಾಣಕ್ಕೆ ಬಂದು ಪ್ರಯಾಣಿಕರನ್ನು ಹತ್ತಿಸಿಕೊಂಡು ನಿಲ್ದಾಣದಿಂದ ಸುಮಾರು 10-15 ಗಂಟೆಗೆ ಬಿಟ್ಟು ಬಾರಂದೂರು, ಎಂ ಸಿ ಹಳ್ಳಿ ಮಾರ್ಗವಾಗಿ ತರೀಕೆರೆಗೆ ಬರುವಾಗ ಸುಮಾರು 10-45 ಗಂಟೆ ಸಮಯದಲ್ಲಿ ಗಂಟೆ ಕಣಿವೆ ಇಳಿಜಾರಿನಲ್ಲಿ ಬರುತ್ತಿರುವಾಗ ಆರೋಪಿಯಾದ ನೀವು ಬಸ್ ನಿಲುಗಡೆಗೆ ಕೈ ತೋರಿಸಿದ್ದು, ಆದರೆ ಬಸ್ಸಿನ ಚಾಲಕರು ಆ ಸ್ಥಳದಲ್ಲಿ ಬಸ್ ನಿಲ್ಲಿಸದೇ ತರೀಕೆರೆ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣಕ್ಕೆ ಸಮಯ ಸುಮಾರು ಬೆಳಿಗ್ಗೆ 11-00 ಗಂಟೆಗೆ ಬಂದು ನಿಲ್ಲಿಸಿದ್ದು, ನಂತರ ಬಸ್ಸಿನ ಚಾಲಕರಾದ ಚಾಸಾ-1 ಮತ್ತು 4 ರವರು ಬಸ್ ಸ್ಟ್ಯಾಂಡಿನಲ್ಲಿರುವ ಹೋಟೆಲ್ ನಲ್ಲಿ ಟೀ

ಕುಡಿಯುತ್ತಿರುವಾಗ ಆರೋಪಿಯಾದ ನೀವು ಏಕಾಏಕಿ ಬಂದು ಸೂಳೆಮಕ್ಕಳ, ಬೋಳಿಮಕ್ಕಳ ಬಸ್ ನ್ನು ನಿಲ್ಲಿಸಲು ನಾನು ಕೈ ತೋರಿಸಿದರೂ ಸಹ ಬಸ್ ನಿಲ್ಲಿಸದೆ ಹಾಗೇ ಬರುತ್ತೀರಾ ಎಂದು ಅವಾಚ್ಯವಾಗಿ ಬೈದಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ.**504** ರ ರೀತ್ಯಾ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ, ಚಾಸಾ-1 ರವರು ಏಕೆ ಬೈಯುತ್ತಿದ್ದೀರಾ ಎಂದು ಆರೋಪಿಯಾದ ನಿಮ್ಮನ್ನು ಕೇಳಿದ್ದಕ್ಕೆ ನೀವು ಏಕಾಏಕಿ ಅವರಿಗೆ ಕೈಯಿಂದ ಎಡದೇ ಕಪಾಳದ ಕಿವಿಯ ಹತ್ತಿರ ಹೊಡೆದು ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ.**323** ರ ರೀತ್ಯಾ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ, ಆರೋಪಿಯಾದ ನೀವು ಚಾಸಾ-1 ರವರು ಕರ್ತವ್ಯಕ್ಕೆ ಹೋಗದಂತೆ ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ.**353** ರ ರೀತ್ಯಾ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿಃ07.01.2025 Sd/-

ಹಿ. ಪ್ರಧಾನ ಪ್ರದನ್ಯಾದಂ, ತರೀಕೆರೆ.

ಪ್ರಃ 1) ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉಃ

ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?

ಉಃ

(ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

ದಿನಾಂಕಃ07.01.2025

Sd/-

ಹಿ. ಪ್ರಧಾನ ಪ್ರ.ದ.ನ್ಯಾ.ದಂ ತರೀಕೆರೆ.

ಆರೋಪಿತರ ಸಹಿಃ